# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 94 |
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 09.12.2024 |
| ಉತ್ತರಿಸುವವರು | : | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಯಂ, ಗುತ್ತಿಗೆ ಆಧಾರದ ಮೇಲೆ ಎಷ್ಟು ಜನ ವನ್ಯಜೀವಿ ಸಂರಕ್ಷಕರು (ಹಾವು, ಮಂಗ, ಮೊಸಳೆ , ರಣಹದ್ದು, ಬಾವಲಿ ಪಕ್ಷಿ) ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಇವರಿಗೆ ನೀಡುತ್ತಿರುವ ಗೌರವಧನ ಹಾಗೂ ಇನ್ನಿತರ ಸೌಲಭ್ಯಗಳನೇನು; (ವಿವರ ನೀಡುವುದು). | ಅರಣ್ಯ ಇಲಾಖೆಯಲ್ಲಿ ಇಲಾಖೆಯ ಸಿಬ್ಬಂದಿ ಹೊರತು ಖಾಯಂ/ಗುತ್ತಿಗೆ ಆಧಾರದಲ್ಲಿ ವನ್ಯಜೀವಿ ಸಂರಕ್ಷಕರುಗಳು ಇರುವುದಿಲ್ಲ. |
| (ಆ) | ವನ್ಯಜೀವಿ ಸಂರಕ್ಷಕರು ಈ ವನ್ಯಜೀವಿಗಳ ಸಂರಕ್ಷಣೆಯ ಸಂದರ್ಭದಲ್ಲಿ ಹಾವು ಕಡಿತ, ಪ್ರಾಣಿ ದಾಳಿಯಿಂದ ಮೃತಪಟ್ಟರೆ: ಖಾಯಂ ಆಗಿ ಅಂಗವಿಕಲ ಹೊಂದಿದರೆ ಸರ್ಕಾರದಿಂದ ಸಿಗುವ ಸೌಲಭ್ಯಗಳೇನು (ವಿವರ ನೀಡುವುದು) | ಅನ್ವಯಿಸುವುದಿಲ್ಲ. |
| (ಇ) | ಕಳೆದ ಎರಡು ವರ್ಷಗಳಲ್ಲಿ ರಾಜ್ಯಾದ್ಯಂತ ವನ್ಯಜೀವಿಗಳಿಂದ (ಹಾವು, ಮಂಗ, ಮೊಸಳೆ ರಣಹದ್ದು, ಬಾವಲಿ ಪಕ್ಷಿ) ಎಷ್ಟು ಸಾರ್ವಜನಿಕರ ಮೇಲೆ ದಾಳಿಯಾಗಿದೆ; ಎಷ್ಟು ಜನರು ಮೃತಪಟ್ಟಿದ್ದಾರೆ; ದಾಖಲಾಗಿರುವ ಪ್ರಕರಣಗಳೆಷ್ಟು; | ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಹಾವು ಮತ್ತು ಮಂಗಗಳಿಂದ ಆಗಿರುವ ದಾಳಿಯ ಕುರಿತು ಅರಣ್ಯ ಇಲಾಖೆಯಲ್ಲಿ ನಿಖರ ಮಾಹಿತಿ ಇರುವುದಿಲ್ಲ.<br><br>ಮುಂದುವರೆದು, ಮೊಸಳೆ ದಾಳಿಯಿಂದ 2022-23ನೇ ಸಾಲಿನಲ್ಲಿ 04 ಸಂಖ್ಯೆ ಮತ್ತು 2023-24ನೇ ಸಾಲಿನಲ್ಲಿ 01 ಸಂಖ್ಯೆ ಮಾನವ ಪ್ರಾಣಹಾನಿ ಪ್ರಕರಣಗಳು ಸಂಭವಿಸಿರುತ್ತವೆ. ರಣಹದ್ದು, ಹಾಗೂ ಬಾವಲಿ ಪಕ್ಷಿಗಳಿಂದ ಸಾರ್ವಜನಿಕರ ಮೇಲೆ ದಾಳಿ ಆಗಿರುವ ಪ್ರಕರಣಗಳು ವರದಿಯಾಗಿರುವುದಿಲ್ಲ. |
| (ಈ) | ಕಳೆದ ಎರಡು ವರ್ಷಗಳಿಂದ ಎಷ್ಟು ವನ್ಯಜೀವಿಗಳನ್ನು (ಹಾವು, ಮಂಗ, ಮೊಸಳೆ ರಣಹದ್ದು, ಬಾವಲಿ ಪಕ್ಷಿ) ಸಂರಕ್ಷಿಸಿ ಅರಣ್ಯಕ್ಕೆ ಬಿಡಲಾಗಿದೆ; (ಸಮಗ್ರ ವಿವರ ನೀಡುವುದು)? | ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಹಾವು, ಮಂಗ, ಮೊಸಳೆ ರಣಹದ್ದು, ಬಾವಲಿ ಪಕ್ಷಿ ಹಾಗೂ ಇನ್ನಿತರೆ ವನ್ಯಜೀವಿಗಳನ್ನು ಸಂರಕ್ಷಿಸಿ ಅರಣ್ಯಕ್ಕೆ ಬಿಡುಗಡೆ ಮಾಡಲಾದ ವಿವರ ಈ ಕೆಳಕಂಡಂತಿದೆ: |

| ವನ್ಯಜೀವಿ ಪ್ರಭೇದಗಳು | 2022-23 | 2023-24 |
|---|---|---|
| ಹಾವು | 1130 | 1048 |
| ಮಂಗ | 328 | 226 |
| ಮೊಸಳೆ | 20 | 35 |
| ರಣಹದ್ದು | - | - |
| ಬಾವಲಿ | - | - |

**ಸಂಖ್ಯೆ: ಅಪಜೀ 152 ಎಫ್‌ಡಬ್ಲ್ಯೂಎಲ್ 2024**

(ಸಹಿ)

**(ಈಶ್ವರ ಬಿ.ಖಂಡ್ರೆ)**
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು